ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ , ಶಾಲಾ ಶಿಕ್ಷಣ ಇಲಾಖೆ,ನೃಪತುಂಗ ರಸ್ತೆ ಬೆಂಗಳೂರು

ಸಂಖ್ಯೆ: ಎಂ2/ಪಿ.ಎಂ ಪೋಷಣ್/ತೊ.ಬೇ.ಖ/ 1936506/2026-27 ದಿನಾಂಕ : 22.05.2026

ಇವರಿಗೆ,
ರಾಜ್ಯದ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್,

ಮಾನ್ಯರೇ,

ವಿಷಯ: ಪೂರ್ವ ಪ್ರಾಥಮಿಕ ಹಾಗೂ 1-10ನೇ ತರಗತಿಯ ವಿದ್ಯಾರ್ಥಿಗಳ ಬಿಸಿಯೂಟಕ್ಕೆ ಅಗತ್ಯವಿರುವ ತೊಗರಿ ಬೇಳೆ/ಕಾಳುಗಳನ್ನು ಶಾಲಾ ಹಂತದಲ್ಲಿ ಖರೀದಿಸಲು ಅನುಮತಿ ನೀಡಿರುವ ಬಗ್ಗೆ.

ಈ ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಈ ಹಿಂದೆ ತೊಗರಿಬೇಳೆ ಗುಣಮಟ್ಟದ ಕುರಿತು ಜಿಲ್ಲೆಗಳಿಂದ ತಕರಾರು ಬಂದ ಕಾರಣ, ಈ ಬಾರಿ ಟೆಂಡರ್ ಪ್ರಕ್ರಿಯೆ ನಿಯಮಗಳಲ್ಲಿ ಕೆಲವೊಂದು ಬದಲಾವಣೆ ಮಾಡಿ ಒಳ್ಳೆಯ ಗುಣಮಟ್ಟದ ತೊಗರಿಬೇಳೆಯನ್ನು ಸರಬರಾಜು ಮಾಡಲು ಕ್ರಮವಹಿಸಲಾಗುತ್ತಿದೆ.

ಈ ಮಧ್ಯೆ ಟೆಂಡರ್ ಪ್ರಕ್ರಿಯೆಯಲ್ಲಿ ಇನ್ನೂ ಹೆಚ್ಚಿನ ಕಾಲದ ಅವಶ್ಯಕತೆ ಕಂಡುಬಂದ ಹಿನ್ನಲೆಯಲ್ಲಿ, ಮತ್ತು ಕೆಲವೊಂದು ಜಿಲ್ಲೆಗಳಲ್ಲಿ ಇದ್ದಂತಹ ಬಫರ್ ಸ್ಟಾಕ್ ಮುಗಿದ ಕಾರಣ ಟೆಂಡರ್ ಪ್ರಕ್ರಿಯೆ ಆಗುವವರೆಗೆ ಸ್ಥಳೀಯವಾಗಿ ತೊಗರಿಬೇಳೆಯನ್ನು ಪರಿವರ್ತನ ವೆಚ್ಚದಲ್ಲಿ ಲಭ್ಯವಿರುವ ಹಣದಿಂದ ಖರೀದಿಸಲು ಅನುಮತಿ ನೀಡುವಂತೆ ವಿವಿಧ ಜಿಲ್ಲೆಗಳಿಂದ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪ್ರಸ್ತುತ ಟೆಂಡರ್ ಪ್ರಕ್ರಿಯೆ ಮುಗಿದು ಮತ್ತು ತೊಗರಿಬೇಳೆ ಸರಬರಾಜು ಆಗುವವರೆಗೆ, ಎಲ್ಲಾ ಜಿಲ್ಲೆಯ ಶಿಕ್ಷಣಾಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳಿಗೆ ತೊಗರಿಬೇಳೆಯನ್ನು ಪರಿವರ್ತನ ವೆಚ್ಚದ ಮೊತ್ತದಿಂದ ನಿಯಮಾನುಸಾರ ಶಾಲಾ ಹಂತದಲ್ಲಿ ಖರೀದಿಸಲು ಸೂಚಿಸಿದೆ ಹಾಗೆಯೇ ಸದರಿ ತೊಗರಿಬೇಳೆಯ ಪ್ರತಿ ಕೆ.ಜಿಗೆ ದರ ರೂ.105/-ಗಳಿಗೆ ಸೀಮಿತಗೊಳಿಸಿದೆ. ತೊಗರಿಬೇಳೆಯ ಜೊತೆಗೆ ಇತರೆ ಸ್ಥಳೀಯವಾಗಿ ಲಭ್ಯವಿರುವ ಬೇಳೆ/ಕಾಳುಗಳನ್ನು ಉಪಯೋಗಿಸಿಕೊಂಡು ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ

Digitally signed by
VIKAS KISHOR SURALKAR
Date: 22-05-2026
15:20:46

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಯನ್ನು

1. ರಾಜ್ಯದ ಎಲ್ಲಾ ಜಿಲ್ಲೆಗಳ ಪಿ ಎಂ ಪೋಷಣ್ ಶಿಕ್ಷಣಾಧಿಕಾರಿಗಳು ಜಿಲ್ಲಾ ಪಂಚಾಯತ್
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
3. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಪಿ ಎಂ ಪೋಷಣ್ ಸಹಾಯಕ ನಿರ್ದೇಶಕರು
4. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರ ಅಗತ್ಯ ಕ್ರಮಕ್ಕಾಗಿ

Scanned with OKEN Scanner